**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ 32/2023**

**ಸಾಕ್ಷಿ ವಿಚಾರಣೆ ವಿ ಸಿ ಮೂಲಕ ಕೋ ಆರ್ಡಿನೇಟರ್ ಖಾದರಬಾಷಾ ಎಂ ಹರಿವಾಣ ರವರ**

**ಸಮ್ಮುಖದಲ್ಲಿ ಅವರ email id– pivigilancegdg@gmail.com**

ಪ್ರಾಸಾ–01

ಚಾಸಾ–01

| | | |
|---|---|---|
| ಸಾಕ್ಷಿಯ ಹೆಸರು | – | ಸುರೇಶ ಯಳ್ಳೂರ |
| ತಂದೆ ಹೆಸರು | – | ಹನುಮಂತಪ್ಪ |
| ವಯಸ್ಸು | – | 47 ವರ್ಷ |
| ಉದ್ಯೋಗ | – | ಪೋಲೀಸ ಇನ್ಸಪೆಕ್ಟರ , ಗದಗ ಹೆಸ್ಕಾಂ ವಿಜಿಲೆನ್ಸ ಪೋಲಿಸಠಾಣೆ |
| ವಾಸಸ್ಥಳ | – | ಗದಗ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | – | 29–12–2025 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ಹಳೆ ಹುಬ್ಬಳ್ಳಿ ಪೋಲಿಸಠಾಣೆಯಲ್ಲಿ ದಿಃ 31–1–2023 ರಿಂದ 2–1–2025 ರ ವರೆಗೆ ಪಿ ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನು. ಆರ್ ಕೆ ಪಾಟೀಲ ರವರು ಆಗ ಹುಬ್ಬಳ್ಳಿ ದಕ್ಷಿಣ ಉಪವಿಭಾಗದ ಎಸಿಪಿ ಎಂದು ಕೆಲಸ ಮಾಡುತ್ತಿದ್ದರು. ಚಾಸಾ–6 ರಿಂದ 14 ರವರು ( ಹೆಸರು ಹೇಳಿದ್ದಾರೆ) ಹಳೆ ಹುಬ್ಬಳ್ಳಿ ಪೋಲಿಸಠಾಣೆಯಲ್ಲಿ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು.

2. ದಿಃ 21–5–2023 ರಂದು ಬೆಳಿಗ್ಗೆ 10 ಘಂಟೆಗೆ ನಾನು ಠಾಣಾ ವ್ಯಾಪ್ತಿಯ ಹಳೆ ಹುಬ್ಬಳ್ಳಿ ಆನಂದ ನಗರದಲ್ಲಿ ಪೆಟ್ರೋಲಿಂಗನಲ್ಲಿದ್ದಾಗ ಒಬ್ಬ ಮಾಹಿತಿದಾರನು ಪೋನ ಮಾಡಿ ಆನಂದರ ನಗರದ ಕುಷ್ಟರೋಗ ಆಸ್ಪತ್ರೆಯ ಹತ್ತಿರ ಸಾರ್ವಜನಿಕ ರಸ್ತೆಯ ಮೇಲೆ ಕೆಲವು ಜನರು ಅನಧೀಕೃತವಾಗಿ

ಗಾಂಜಾವನ್ನು ಸಾಗಾಟ ಮತ್ತು ಮಾರಾಟ ಮಾಡಲು 11 ಘಂಟೆಯಿಂದ 12 ವರೆಯ ಅವಧಿಯಲ್ಲಿ ಹೊರಟಿರುತ್ತಾರೆ ಎಂದು ಮಾಹಿತಿ ನೀಡಿದರು. ನಂತರ ನಾನು ಠಾಣೆಗೆ ಬಂದು ಈ ವಿಷಯ ಕುರಿತು ಕ್ರಮ ಕೈಗೊಳ್ಳಲು ಹಾಗೂ ದಾಳಿಯ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಸಹಕರಿಸಲು ಕೋರಿಕೆ ಪತ್ರವನ್ನು ಎಸಿಪಿ ಆರ್ ಕೆ ಪಾಟೀಲ ರವರಿಗೆ ಪಿಸಿ ಹೊಸೂರ ರವರ ಮುಖಾಂತರ ಕಳುಹಿಸಿದೆನು. ಸಾಕ್ಷಿ ಆ ಪತ್ರ ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 1 (ಎ) ಎಂದು ಗುರುತಿಸಲಾಗಿದೆ. ಅವರುಕೊಟ್ಟ ಆದೇಶದ ಪತ್ರ ನೋಡಿ ಸಾಕ್ಷಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 2 ಎಂದು ಗುರುತಿಸಲಾಗಿದೆ. ಅವರಿಗೆ ಪತ್ರಾಂಕಿತ ಅಧಿಕಾರಿಯಾಗಿ ಬನ್ನಿ ಎಂದು ಕೊಟ್ಟ ಮನವಿ ಪತ್ರ ನೋಡಿ ಸಾಕ್ಷಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 3 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 3 (ಎ) ಎಂದು ಗುರುತಿಸಲಾಗಿದೆ. ಅವರು ಕೊಟ್ಟ ಒಪ್ಪಿಗೆ ಪತ್ರ ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 4 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಆರ್ ಕೆ ಪಾಟೀಲ ರವರ ಸಹಿಯನ್ನು ನಿಶಾನೆ ಪಿಃ 4(ಎ) ಎಂದು ಗುರುತಿಸಲಾಗಿದೆ. ನಂತರ ಆರ್ ಕೆ ಪಾಟೀಲ ರವರು ಠಾಣೆಗೆ ಬೆಳಿಗ್ಗೆ 10.45 ಘಂಟೆಗೆ ಬಂದರು. ನಂತರ ಇಬ್ಬರು ಸರ್ಕಾರಿ ಪಂಚರನ್ನು ಮತ್ತು ಒಬ್ಬ ತೂಕ ಮಾಡುವ ವ್ಯಕ್ತಿಯನ್ನು ಕರೆದುಕೊಂಡು ಬರಲು ಹೆಚ್ ಸಿ ಗೊಬ್ಬರಗುಂಪಿರವರಿಗೆ ಸೂಚಿಸಿದೆನು. ವೈದ್ಯಕೀಯ ಅಧೀಕ್ಷಕರು ಇ ಎಸ್ ಐ ಆಸ್ಪತ್ರೆಯವರಿಗೆ ಆ ರೀತಿ ಪಂಚರನ್ನು ಕಳುಹಿಸಲು ಕೋರಿಕೆ ಪತ್ರ ಕೊಟ್ಟೆವು. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಆ ದಾಖಲೆಯನ್ನು ನಿಶಾನೆ ಪಿಃ 5 ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 5(ಎ) ಎಂದು ಗುರುತಿಸಲಾಗಿದೆ. ವೈದ್ಯಕೀಯ ಅಧೀಕ್ಷಕರು ಇಬ್ಬರು ಪಂಚರಾದ ರಮೇಶ ಬೋಜನಾಯಕ,ದಶರಥ ಮಾದರ ರವರನ್ನು ನೇಮಕ ಮಾಡಿ ಕಳುಹಿಸಿದರು. ಸಾಕ್ಷಿ ಆ ಪತ್ರ ನೋಡಿ ಗುರುತಿಸಿರುತ್ತಾರೆ. ಆ ಪತ್ರವನ್ನು ನಿಶಾನೆ ಪಿಃ 6

ಎಂದು ಗುರುತಿಸಲಾಗಿದೆ. ಆನಂತರ ಅವರ ಜೊತೆಗೆ ಖಾದರಬಾಷಾ ಎಂಬ ತೂಕ ಮಾಡುವವರನ್ನು ಕೂಡ ಕರೆದುಕೊಂಡು ಬಂದರು. ಅವರು ಮೂರು ಜನರಿಗೂ ಈ ವಿಚಾರ ತಿಳಿಸಿ ದಾಳಿ ಸಮಯದಲ್ಲಿ ಸಹಕರಿಸಲು ಅವರುಗಳಿಗೆ ನೋಟೀಸ ಕೊಟ್ಟು ಅವರು ಕೊಟ್ಟ ಅನುಮತಿ ಪತ್ರವನ್ನು ಸ್ವೀಕರಿಸಿರುತ್ತೇವೆ. ಸಾಕ್ಷಿ ರಮೇಶ ನಾಯ್ಕು ರವರಿಗೆ ಕೊಟ್ಟ ನೋಟೀಸ ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 7 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 7(ಎ) ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ರಮೇಶ ನಾಯ್ಕು ರವರ ಸಹಿಯನ್ನು ನಿಶಾನೆ ಪಿಃ 7 (ಬಿ) ಎಂದು ಗುರುತಿಸಲಾಗಿದೆ. ಅದೇರೀತಿ ರಮೇಶ ನಾಯ್ಕು ರವರು ಕೊಟ್ಟ ಒಪ್ಪಿಗೆ ಪತ್ರ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿಃ 8 ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 8(ಎ) ಎಂದು ರಮೇಶ ನಾಯ್ಕು ರವರ ಸಹಿಯನ್ನು ನಿಶಾನೆ ಪಿಃ 8 (ಬಿ) ಎಂದು ಗುರುತಿಸಲಾಗಿದೆ.

3. ಸಾಕ್ಷಿ ದಶರಥ ಮಾದರ ರವರಿಗೆ ಕೊಟ್ಟ ನೋಟೀಸ ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 9 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 9(ಎ) ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ದಶರಥ ರವರ ಸಹಿಯನ್ನು ನಿಶಾನೆ ಪಿಃ 9 (ಬಿ) ಎಂದು ಗುರುತಿಸಲಾಗಿದೆ. ಅದೇರೀತಿ ದಶರಥ ಮಾದರ ರವರು ಕೊಟ್ಟ ಒಪ್ಪಿಗೆ ಪತ್ರ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿಃ 10 ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 10(ಎ) ಎಂದು ದಶರಥ ಮಾದರ ರವರ ಸಹಿಯನ್ನು ನಿಶಾನೆ ಪಿಃ 10(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ಖಾದರಬಾಷಾ ರವರಿಗೆ ಕೊಟ್ಟ ನೋಟೀಸ ಮತ್ತು ಅದರಲ್ಲೇ ಇರುವ ಒಪ್ಪಿಗೆ ಪತ್ರ ಎರಡೂ ನೋಡಿ

ಗುರುತಿಸಿರುತ್ತಾರೆ ಅವುಗಳನ್ನು ಒಟ್ಟು ಸೇರಿಸಿ ನಿಶಾನೆ ಪಿಃ 11 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 11(ಎ) ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಖಾದರಬಾಷಾ ರವರ ಸಹಿಯನ್ನು ನಿಶಾನೆ ಪಿಃ 11 (ಬಿ) ಎಂದು ಗುರುತಿಸಲಾಗಿದೆ. ಅದೇರೀತಿ ಖಾದರ ಬಾಷಾ ರವರು ಕೊಟ್ಟ ಒಪ್ಪಿಗೆ ಪತ್ರದಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 11(ಸಿ) ಎಂದು ಖಾದರ ಬಾಷಾ ರವರ ಸಹಿಯನ್ನು ನಿಶಾನೆ ಪಿಃ 11(ಡಿ) ಎಂದು ಗುರುತಿಸಲಾಗಿದೆ. ನಂತರ ಠಾಣೆಯ ಸಿಬ್ಬಂದಿಗಳಾದ ವಲ್ಯಾಪೂರ, ಕೆಂಚಣ್ಣನವರ , ಅಡನೂರ , ಸುನಗರ ಮತ್ತು ಕರೆಪೂಜಾರಿ ರವರಿಗೆ ಮಾಹಿತಿ ಬಂದ ವಿಷಯ ತಿಳಿಸಿ ದಾಳಿ ಕುರಿತು ಅವರನ್ನು ಕರೆದುಕೊಂಡು ನಮ್ಮೊಂದಿಗೆ ಇಬ್ಬರು ಪಂಚರು ಮತ್ತು ತೂಕ ಮಾಡುವವರನ್ನು ಮತ್ತು ಪತ್ರಾಂಕಿತ ಅಧಿಕಾರಿಗಳನ್ನು ಕರೆದುಕೊಂಡು ಠಾಣೆಯಿಂದ 11.05 ಘಂಟೆಗೆ ಹೊರಟೆವು.

3. ನಾವು ಹಳೆ ಹುಬ್ಬಳ್ಳಿ ಆನಂದನಗರ ಕುಷ್ಟ ರೋಗದ ಆಸ್ಪತ್ರೆಯ ಬಳಿ 100 ಮೀಟರ ದೂರದಲ್ಲಿ ಮರೆಯಾಗಿ ನಮ್ಮ ವಾಹನವನ್ನು ನಿಲ್ಲಿಸಿ ಮಾಹಿತಿ ಬಂದ ಕಡೆ ಹೋಗಿ ನಿಲ್ಲಿಸಿದೆವು. ಆಗ ಸಮಯ 11.20 ಘಂಟೆ ಆಗಿತ್ತು. 11.45 ಘಂಟೆಗೆ ಕುಷ್ಟರೋಗ ಆಸ್ಪತ್ರೆಯ ಮುಂಭಾಗದ ರಸ್ತೆಯ ಮೇಲೆ 4 ಜನರು ಬರುತ್ತಿದ್ದುದನ್ನು ಗಮನಿಸಿ ಒಬ್ಬನು ಬಿಳಿ ಬಣ್ಣದ ಕೈಚೀಲವನ್ನು ಹಿಡಿದುಕೊಂಡು ಬಂದಿದ್ದನ್ನು ಗಮನಿಸಿ ಆತನ ಮೇಲೆ ಸಂಶಯ ಬಂದು ಪಂಚರಿಗೂ ಮತ್ತು ಸಿಬ್ಬಂದಿಯವರಿಗೂ ವಿಷಯ ತಿಳಿಸಿ ತಕ್ಷಣ ಅವರನ್ನು ಸುತ್ತುವರೆದು ಹಿಡಿಯಲು ಪ್ರಯತ್ನಿಸುತ್ತಿದ್ದಾಗ ಅವರಲ್ಲಿ ಒಬ್ಬ ಸಿಕ್ಕಿದ್ದು ಇನ್ನೂ ಮೂರು ಜನರು ಅಡ್ಡ ದಾರಿ ಗಿಡಗಂಟೆಗಳ ಮೂಲಕ ಓಡಿ ಹೋಗುತ್ತಿದ್ದು ನಮ್ಮ ಸಿಬ್ಬಂದಿಗಳಿಗೆ ಹಿಡಿದುಕೊಂಡು ಬರುವಂತೆ ತಿಳಿಸಿದೆನು. ಸಿಬ್ಬಂದಿಯವರಾದ ವಲ್ಯಾಪೂರ ಮತ್ತು ಕೆಂಚಣ್ಣನವರ ಅವರನ್ನು ಹಿಡಿಯಲು ಪ್ರಯತ್ನಿಸಿ ಅವರು ಸಿಗದೆ ಇದ್ದುದರಿಂದ ಅವರು ಸಿಗಲಿಲ್ಲ ಎಂದು ತಿಳಿಸಿದರು. ನಂತರ ನಾನು ಸಿಕ್ಕ ಒಬ್ಬ ವ್ಯಕ್ತಿಯ ಕೈಯಲ್ಲಿದ್ದ ಚೀಲದಲ್ಲಿ ಗಾಂಜಾ ಇದ್ದ ಮಾಹಿತಿ ಇರುವ ಕಾರಣ ಆ

ವ್ಯಕ್ತಿಯ ಹೆಸರು ವಿಚಾರಿಸಲಾಗಿ ಆತನ ಹೆಸರು ಆರೀಫ್ ತಂದೆ ಗೋಪಾಲ ವಾಲ್ಮೀಕಿ ಎಂದು ಹೇಳಿದನು. ಪರಾರಿ ಹೋಗಿರುವ ವ್ಯಕ್ತಿಗಳ ಹೆಸರು ವಿಚಾರಿಸಲಾಗಿ ರಫೀಕ ಗೋಪಾಲ ವಾಲ್ಮೀಕಿ ,ಗೋಪಾಲ ವಾಲ್ಮೀಕಿ, ಶಿವಕುಮಾರ ತುಮಕೂರ ಅಂತಾ ತಿಳಿಸಿದರು. ನಂತರ ಇದ್ದ ಆರೋಪಿಯನ್ನು ನಾನು ನಿನ್ನ ಹತ್ತಿರ ಗಾಂಜಾ ಇದೆ ಎಂಬ ಬಗ್ಗೆ ಮಾಹಿತಿ ಇದ್ದು ನಿಮ್ಮ ಅಂಗಜಪ್ತಿಯನ್ನು ಹಾಜರಿರುವ ಪತ್ರಾಂಕಿತ ಅಧಿಕಾರಿಯ ಸಮಕ್ಷಮ ಮಾಡಿಸಬೇಕೆ ಅಥವಾ ಸಮೀಪದ ನ್ಯಾಯಾಧೀಶರ ಮೂಲಕ ಅಂಗ ಜಪ್ತಿ ಮಾಡಿಸಬೇಕೆ ಎಂದು ಆತನಿಗೆ ನೋಟೀಸ ನೀಡಿದ್ದು ಅದಕ್ಕೆ ಆತನು ಇಲ್ಲೇ ಇರುವ ಪತ್ರಾಂಕಿತ ಅಧಿಕಾರಿಯ ಮೂಲಕ ಅಂಗ ಜಪ್ತಿ ಮಾಡುವಂತೆ ತನ್ನ ಒಪ್ಪಿಗೆ ಪತ್ರ ನೀಡಿದ್ದನ್ನು ಸ್ವೀಕರಿಸಿದೆನು. ಸಾಕ್ಷಿ ಆರೋಪಿಗೆ ಕೊಟ್ಟ ಆ ಪತ್ರ ನೋಡಿ ಗುರುತಿಸಿರುತ್ತಾರೆ ಅ ಪತ್ರವನ್ನು ನಿಶಾನೆ ಪಿಃ 12 ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 12(ಎ) ಎಂದು, ಅದೇರೀತಿ ಸಾಕ್ಷಿ ಗುರುತಿಸಿದ ಆರಿಫ್ ರವರ ಸಹಿಯನ್ನು ನಿಶಾನೆ ಪಿಃ 12 (ಬಿ. ಎಂದು ಕ್ರಮವಾಗಿ ಗುರುತಿಸಲಾಗಿದೆ. ಅದೇರೀತಿ ಆರೋಪಿ ಕೊಟ್ಟ ನೀಡಿದ ಒಪ್ಪಿಗೆ ಪತ್ರವನ್ನು ನಿಶಾನೆ ಪಿಃ 13 ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 13 (ಎ) ಎಂದು , ಆರೀಫ್ ರವರ ಸಹಿಯನ್ನು ನಿಶಾನೆ ಪಿಃ 13 (ಬಿ) ಎಂದು ಕ್ರಮವಾಗಿ ಗುರುತಿಸಲಾಗಿದೆ.

4. ನಂತರ ಪತ್ರಾಂಕಿತ ಅಧಿಕಾರಿಯವರಿಗೆ ಸದರಿಯವರನ್ನು ಅಂಗಜಪ್ತಿ ಮಾಡಲು ಕೋರಿಕೊಂಡಾಗ ಅವರು ಆತನ ಅಂಗ ಜಪ್ತಿ ಮಾಡಲಾಗಿ ಆತನ ಬಳಿಯಿಂದ ಬಿಳಿ ಬಣ್ಣದ ಬಟ್ಟೆಯ ಕೈಚೀಲದಲ್ಲಿ ಎರಡು ಪ್ಲಾಸ್ಟಿಕ ಬ್ಯಾಗಗಳಲ್ಲಿ 550 ಗ್ರಾಂ ಹಾಗೂ 503 ಗ್ರಾಂ ಗಾಂಜಾದ ಎಲೆ ಮೊಗ್ಗು ಹೂವು ಇದ್ದು ಘಾಟು ವಾಸನೆ ಬರುತ್ತಿದ್ದು ತೂಕ ಮಾಡುವ ವ್ಯಕ್ತಿಯಿಂದ ತೂಕ ಮಾಡಿಸಲಾಗಿ ಅವುಗಳ ಒಟ್ಟು ತೂಕ 1053 ಗ್ರಾಂ ಇತ್ತು. ಆತನ ಬಳಿ 500 ರೂ ಹಣ ಸಿಕ್ಕಿರುತ್ತದೆ. 1053 ಗ್ರಾಂ ಗಾಂಜಾವನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ ಮಾಡಿ ASI 4.6 ಎಂಬ ಸೀಲನ್ನು ಪಂಚರ ಸಮಕ್ಷಮ ಹಾಕಿ ಅದಕ್ಕೆ

ಬಿ-1 ಎಂದು ಗುರುತು ಮಾಡಲಾಯಿತು. ಅದಕ್ಕೆ ನಮ್ಮ , ಪಂಚರ, ಪತ್ರಾಂಕಿತ ಅಧಿಕಾರಿಗಳ ಸಹಿವುಳ್ಳ ಚೀಟಿ ಅಂಟಿಸಲಾಯಿತು. ಹಣ ಸಿಕ್ಕಿದ್ದನ್ನು ಕವರನಲ್ಲಿ ಹಾಕಿ ಪ್ರತ್ಯೇಕವಾಗಿ ಸೀಲು ಮಾಡಿದೆವು. ನಂತರ ಎರಡೂ ವಸ್ತುಗಳನ್ನು ಪಂಚರ ಸಮಕ್ಷಮ ನನ್ನ ತಾಬಾಕ್ಕೆ ತೆಗೆದುಕೊಂಡಿರುತ್ತೇನೆ. ಇದಕ್ಕೆ ಸಂಬಂದಪಟ್ಟ ಹಾಗೆ ಪಂಚನಾಮೆಯನ್ನು ಬೆಳಿಗ್ಗೆ 11.45 ರಿಂದ 12.45 ರ ವರೆಗೆ ಜರುಗಿಸಿರುತ್ತೇನೆ.

5. ಜಪ್ತು ಮಾಡಿದ ಗಾಂಜಾವನ್ನು 1 ನೇ ಆರೋಪಿಗೆ ಎಲ್ಲಿಂದ ತಂದಿರುವೆ ಎಂದು ಕೇಳಲಾಗಿ ಪರಾರಿಯಾದ ತನ್ನ ತಂದೆ ಗೋಪಾಲ ಮತ್ತು ತಮ್ಮ ರಫೀಕ ಹಾಗೂ ತನ್ನ ಜೊತೆಗೆ ಬಂದ ಸ್ನೇಹಿತ ಶಿವಕುಮಾರ ತುಮಕೂರ ನಾವೆಲ್ಲರೂ ಸೇರಿಕೊಂಡು ಮಿರಜನಲ್ಲಿ ಒಬ್ಬ ದಾರಿ ಹೋಕನ ಕಡೆಯಿಂದ ತೆಗೆದುಕೊಂಡು ಬಂದಿದ್ದು ಅದನ್ನು ಇಂದು ಇಲ್ಲಿ ಮಾರಾಟ ಮಾಡಿ ಸಾರ್ವಜನಿಕರಿಂದ ಹಣ ಸಂಪಾದನೆ ಮಾಡಲು ತೆಗೆದುಕೊಂಡು ಬಂದಿರುವುದಾಗಿ ತಿಳಿಸಿದನು. ಪಂಚನಾಮೆಯನ್ನು ಲ್ಯಾಪಟಾಪನಲ್ಲಿ ಸಿಬ್ಬಂದಿ ಕರಿಪೂಜಾರ ರವರಿಂದ ಟೈಪ ಮಾಡಿಸಲಾಯಿತು ಹಾಗೂ ಪಂಚನಾಮೆ ಕಾಲಕ್ಕೆ ಸಿಬ್ಬಂದಿ ಅಡನೂರ ರವರಿಂದ ಫೋಟೊಗಳನ್ನು ತೆಗೆಸಲಾಯಿತು. ಅಲ್ಲೇ ಪಂಚನಾಮೆಯನ್ನು ಪ್ರಿಂಟ ತೆಗೆದು ಅದಕ್ಕೆ ಪತ್ರಾಂಕಿತ ಅಧಿಕಾರಿ, ಪಂಚರ, ತೂಕ ಮಾಡುವ ವ್ಯಕ್ತಿ ,ಗಣಕೀಕೃತ ಮಾಡಿದವರು , ಫೋಟೊ ತೆಗೆದವರು ಹಾಗೂ ನಾನು ಎಲ್ಲರೂ ಸಹಿ ಮಾಡಿರುತ್ತೇವೆ ಎಂದು ಸಾಕ್ಷಿ ಆ ಪಂಚನಾಮೆ ನೋಡಿ ಗುರುತಿಸಿರುತ್ತಾರೆ. ಆ ಪಂಚನಾಮೆಯನ್ನು ನಿಶಾನೆ ಪಿಃ14 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 14 (ಎ) ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ತೆಗೆದ ಫೋಟೊನೋಡಿ ಸಾಕ್ಷಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 15 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಭಾವಚಿತ್ರ ವನ್ನು ನಿಶಾನೆ ಪಿಃ 15(ಎ) ಎಂದು ಗುರುತಿಸಲಾಗಿದೆ.

6. ಆ ಸೀಲನ್ನು ಒಂದನೇ ಪಂಚರಾದ ರಮೇಶಬೋಜಾನಾಯ್ಕು ರವರಿಗೆ ಕೊಟ್ಟು ಅವರ ಸ್ವೀಕೃತಿ ಪತ್ರ ಪಡೆದಿದ್ದೇನೆ. ಸಾಕ್ಷಿ ಆ ಸ್ವೀಕೃತಿ ಪತ್ರನೋಡಿ ಗುರುತಿಸಿರುತ್ತಾರೆ. ಆ ಸ್ವೀಕೃತಿ ಪತ್ರ ನಿಶಾನೆ ಪಿಃ 16 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 16 (ಎ) ಎಂದು ಅದೇರೀತಿ ರಮೇಶ ಬೋಜಾನಾಯ್ಕು ರವರ ಸಹಿಯನ್ನು ನಿಶಾನೆ ಪಿಃ 16 (ಬಿ) ಎಂದು ಕ್ರಮವಾಗಿ ಗುರುತಿಸಲಾಗಿದೆ. ನಂತರ ಆರೋಪಿಯನ್ನು ವಶಕ್ಕೆಪಡೆದುಕೊಂಡು , ಆರೋಪಿ, ಮುದ್ದೆಮಾಲು ಮತ್ತು ಪಂಚನಾಮೆಯನ್ನು ತೆಗೆದುಕೊಂಡು ಪೋಲಿಸಠಾಣೆಗೆ ಬಂದೆವು. ಅಲ್ಲಿ ಸರ್ಕಾರಿ ತರ್ಫೆ ಎಂದು ದೂರನ್ನು ನೀಡಿದ್ದೇನೆ ಎಂದು ಸಾಕ್ಷಿ ಆ ದೂರನ್ನು ನೋಡಿ ಗುರುತಿಸಿರುತಾ್ತರೆ ಅದನ್ನು ನಿಶಾನೆ ಪಿಃ 17 ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 17 (ಎ) ಎಂದು ಗುರುತಿಸಲಾಗಿದೆ. ನಂತರ ಆರೋಪಿ , ಮುದ್ದೆಮಾಲನ್ನು ಹಾಗೂ ಪಂಚನಾಮೆಯನ್ನು ತನಿಖಾಧಿಕಾರಿಯಾದ ಚಾಸಾ-18 ದಿಂಡಲಕೊಪ್ಪ ರವರಿಗೆ ಒಪ್ಪಿಸಿರುತ್ತೇನೆ

7. ಆನಂತರ ದಾಳಿ ಮಾಡಿದ ಬಗ್ಗೆ ಎಸಿಪಿ ರವರಿಗೆ ಮಾಹಿತಿ ಕಳುಹಿಸಿದೆನು. ಆನಂತರ ಈಗ ನಾನು ನೋಡುತ್ತಿರುವ ದಾಖಲೆ ಪ್ರಕಾರ ಶೋಧನಾ ಸಮುಚ್ಚಯ ವರದಿ search without warrant ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಸಾಕ್ಷಿ ಆ ದಾಖಲೆ ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 18 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 18(ಎ) ಎಂದು ಗುರುತಿಸಲಾಗಿದೆ. ಆ ದಿನ ನಾನು ದಸ್ತಗಿರಿ ಮಾಡಿದ ಆರೋಪಿ ಆರಿಫ ವಾಲ್ಮೀಕಿಯವರನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ವಿಸಿ ಮೂಲಕ 1 ನೇ ಆರೋಪಿ ಮತ್ತು 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಅದೇರೀತಿ

ನ್ಯಾಯಾಲಯದಲ್ಲಿರುವ ಆರೋಪಿ ಶಿವಕುಮಾರ ತುಮಕೂರನನ್ನು ನೋಡಿ ಗುರುತಿಸಿರುತ್ತಾರೆ. ಅದರಲ್ಲಿ ದುಡ್ಡು ಜಪ್ತು ಮಾಡಿದ್ದನ್ನು ನೋಡಿದರೆ ಗುರುತಿಸಬಲ್ಲೆ.

ಮುಂದುವರೆದ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲು ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

ಫ್ರಾಸಾ-04

ಚಾಸಾ- 07